ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತೊಂದನೆಯ ಅಧಿವೇಶನ
ಶುಕ್ರವಾರ, ದಿನಾಂಕ: 25ನೇ ಸೆಪ್ಟಂಬರ್, 2020

ಜಾನುವಾರುಗಳಿಗೆ ಬರುವ ವಿವಿಧ ರೀತಿಯ ರೋಗಗಳ ಬಗ್ಗೆ

ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು):-

702(719) ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಜಾನುವಾರುಗಳು "ಚರ್ಮ ಗಂಟು ರೋಗ" ವೆಂಬ ರೋಗದಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಯಾವ ಯಾವ ಜಿಲ್ಲೆಗಳಲ್ಲಿ ಈ ರೋಗವು ವ್ಯಾಪಿಸುತ್ತಿದೆ ;

(ಇ) ಈ ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಒಂದು ವೇಳೆ ಜಾನುವಾರುಗಳಿಗೆ ಸಾವು ಸಂಭವಿಸಿದರೆ ರೈತರಿಗೆ ನೀಡಬಹುದಾದ ಪರಿಹಾರ ಧನ ಎಷ್ಟು ? (ಮಾಹಿತಿ ನೀಡುವುದು)